ಕಾಮಗಾರಿಯನ್ನು ಅನುಷ್ಠಾನಗೊಳಿಸಲು 68.80 ಲಕ್ಷ ರೂಪಾಯಿಗಳ ಒಂದು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಸದರಿ ಕಾಮಗಾರಿಗಳು ಅನುಷ್ಠಾನದಲ್ಲಿದೆ. ಈ ಸಂಬಂಧ ಯಾವುದಾದರೂ ತೊಂದರೆಗಳು ಎದುರಾದಲ್ಲಿ ತಕ್ಷಣವೇ ವಾಹನಗಳ ಮುಖಾಂತರ ಅದನ್ನು ತಾತ್ಕಾಲಿಕವಾಗಿ ನಿವಾರಿಸುವುದಕ್ಕೆ ನಾವು ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಜಮಖಂಡಿ ತಾಲ್ಲೂಕಿನ ಸಾವಳಗಿ ಗ್ರಾಮದ ಪದವಿ ಮಹಾವಿದ್ಯಾಲಯಕ್ಕೆ ಕಟ್ಟಡ ಹಾಗೂ ಸಿಬ್ಬಂದಿ ಮಂಜೂರಾತಿ

240(2778) ಶ್ರೀ ಶ್ರೀಮತಿ ನಿರಾಣಿ ಮುರಗೇಶ್ ರುದ್ರಪ್ಪ (ಬೀಳಗಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಮಖಂಡಿ ತಾಲ್ಲೂಕು ಸಾವಳಗಿ ಗ್ರಾಮದ ಸರ್ಕಾರಿ ಪದವಿ ಮಹಾವಿದ್ಯಾಲಯದಲ್ಲಿ ಸಿಬ್ಬಂದಿ ಹಾಗೂ ಕಟ್ಟಡದ ಕೊರತೆಯಿಂದ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಈ ಕಾಲೇಜಿಗೆ ಮಂಜೂರಾದ ಬೋಧಕ/ ಬೋಧಕೇತರ ಸಿಬ್ಬಂದಿ ಸಂಖ್ಯೆ ಎಷ್ಟು;

ಇ) ಕಟ್ಟಡದ ಅಂದಾಜು ಯೋಜನಾ ವೆಚ್ಚ ಎಷ್ಟು;

ಈ) ಸಿಬ್ಬಂದಿಯ ನೇಮಕಕ್ಕೆ ಹಾಗೂ ಕಟ್ಟಡ ನಿರ್ಮಾಣಕ್ಕೆ ಯಾವಾಗ ಮಂಜೂರಾತಿ ನೀಡಲಾಗುತ್ತದೆ:

ಉ) ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು):

ಅ) ಹೌದು

ಆ) ಸಾವಳಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು 2003–04ನೇ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭಿಸಲಾಗಿದೆ. ಆದರೆ, ಬೋಧಕ/ ಬೋಧಕೇತರರ ಹುದ್ದೆಗಳು ಇನ್ನೂ ಮಂಜೂರಾಗಿರುವುದಿಲ್ಲದ ಕಾರಣ ಸದರಿ ಕಾಲೇಜಿಗೆ ಒಬ್ಬ ಉಪನ್ಯಾಸಕರನ್ನು ರಿಡೆಪ್ಲಾಯ್‌ಮೆಂಟ್ ಮುಖಾಂತರ ವರ್ಗಾಯಿಸಲಾಗಿದ್ದು, ಅವರು ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬೋಧನಾ ಕಾರ್ಯಭಾರಕ್ಕನುಗುಣವಾಗಿ ಬೋಧಿಸಲಾಗುತ್ತಿರುವ ವಿಷಯಗಳಿಗೆ ಒಬ್ಬೊಬ್ಬ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಲಾಗಿದೆ. ಒಬ್ಬರು ಪ್ರಥಮ ದರ್ಜೆ ಸಹಾಯಕರು ಹಾಗೂ ಒಬ್ಬರು ಗ್ರೂಪ್–ಡಿ ನೌಕರರು ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

ಇ) ಕಾಲೇಜಿನ ಕಟ್ಟಡಕ್ಕಾಗಿ ನಿವೇಶನ ಪಡೆಯಲು ಪ್ರಯತ್ನಿಸಲಾಗುತ್ತಿದ್ದು, ನಿವೇಶನ ದೊರೆತ ನಂತರ ಕಟ್ಟಡದ ಅಂದಾಜು ವೆಚ್ಚ ತಯಾರಿಸಲಾಗುತ್ತದೆ.

ಈ ಉ) ಹೊಸದಾಗಿ ಪ್ರಾರಂಭವಾದ ಈ ಕಾಲೇಜಿಗೆ ಬೋಧಕ ಹುದ್ದೆಗಳನ್ನು ಸೃಜಿಸಲು ಶೀಘ್ರಕ್ರಮ ಕೈಗೊಳ್ಳಲಾಗುತ್ತಿದೆ. ಕಾಲೇಜಿನ ಕಟ್ಟಡ ನಿರ್ಮಾಣಕ್ಕೆ ನಿವೇಶನ ದೊರೆತ ನಂತರ ಮುಂದಿನ ಕ್ರಮಕ್ಕೆಗೊಳ್ಳಲಾಗುತ್ತದೆ.

ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಆದರೆ, ಜಮಖಂಡಿ ತಾಲ್ಲೂಕಿನ ಸಾವಳಗಿ ಗ್ರಾಮದಲ್ಲಿ 25 ಸಾವಿರ ಜನಸಂಖ್ಯೆ ಇದ್ದು ಆ ಗ್ರಾಮದ ಅರವತ್ತು ಕಿಲೋಮೀಟರ್ ರೇಡಿಯಸ್‌ನಲ್ಲಿ ಯಾವುದೇ ಕಾಲೇಜುಗಳು ಇಲ್ಲದಿರುವುದರಿಂದ 120 ವಿದ್ಯಾರ್ಥಿಗಳು ಅಲ್ಲಿ ಕಲಿಯುತ್ತಿರುವುದರಿಂದ ಮತ್ತು 11 ಜನ ಉಪನ್ಯಾಸಕರು ಇರುವಂಥ ಜಾಗದಲ್ಲಿ ಕೇವಲ ಒಬ್ಬರು ಉಪನ್ಯಾಸಕರು ಇರುವುದರಿಂದ ಅವರೇ ಪ್ರಿನ್ಸಿಪಾಲರು, ಉಪನ್ಯಾಸಕರು, ಪ್ಯೂನ್, ಕ್ಲಾರ್ಕ್ ಆಗಿರುವಂಥ ಸಂದರ್ಭ ಸಾವಳಗಿ ಭಾಗದಲ್ಲಿದೆ. ಆದ್ದರಿಂದ ಸಾಧ್ಯವಾದಷ್ಟು ಬೇಗನೆ ಖಾಲಿ ಇರುವಂಥ 10 ಶಿಕ್ಷಕರನ್ನು ಒದಗಿಸಿಕೊಡಬೇಕು. ಮಾನ್ಯ ಸಚಿವರು ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಇದುವರೆಗೆ ಯಾವುದೇ ಅತಿಥಿ ಉಪನ್ಯಾಸಕರು ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲ. ಆದುದರಿಂದ ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಸಾಧ್ಯವಾದಷ್ಟು ಬೇಗನೆ ಉಳಿದಿರುವ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಇದರ ಜೊತೆಗೆ ಅಲ್ಲಿ ಯಾವುದೇ ರೀತಿಯ ಕಟ್ಟಡವಾಗಲಿ, ಪೀಠೋಪಕರಣಗಳಾಗಲಿ ಇನ್ನಿತರ ಯಾವುದೇ ಅನುಕೂಲಕರವಾದಂಥ ಸೌಲಭ್ಯಗಳು ಇಲ್ಲದಿರುವುದರಿಂದ ಅದನ್ನು ಸಾಧ್ಯವಾದಷ್ಟು ಬೇಗನೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ಇದನ್ನು ಯಾವಾಗ ಪೂರ್ತಿ ಮಾಡುತ್ತಾರೆಂದು ಹೇಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್:– ಮಾನ್ಯ ಅಧ್ಯಕ್ಷರೆ, ಇದು ಹೊಸದಾಗಿ ಮಂಜೂರಾಗಿರುವ ಕಾಲೇಜು ಅಲ್ಲಿ ಪೋಸ್ಟ್ ಕ್ರಿಯೇಟ್ ಆಗಿರಲಿಲ್ಲ, ಈಗತಾನೇ ಹಣಕಾಸು ಇಲಾಖೆಯವರಿಂದ ಪೋಸ್ಟ್‌ನ್ನು ಕ್ರಿಯೇಟ್ ಮಾಡಿಸಿದ್ದೇವೆ. ಸಧ್ಯದಲ್ಲಿ ಕನ್ನಡ, ಆಂಗ್ಲಭಾಷೆ, ಇತಿಹಾಸ, ರಾಜ್ಯಶಾಸ್ತ್ರ ಸಮಾಜಶಾಸ್ತ್ರಕ್ಕೆ ಒಬ್ಬೊಬ್ಬರು ಅತಿಥಿ ಉಪನ್ಯಾಸಕರೆಂದು ಅಪಾಯಿಂಟ್‌ಮೆಂಟ್ ಮಾಡಿದ್ದೇವೆ. ಅವರು ಆದಷ್ಟು ಜಾಗ್ರತೆ ಅಲ್ಲಿಗೆ ಹೋಗಿದ್ದಾರೋ ಇಲ್ಲವೋ ಎಂಬ ಬಗ್ಗೆ ಪರಿಶೀಲನೆ ಮಾಡುತ್ತೇನೆ ಮತ್ತು ಅದಕ್ಕೆ ಒತ್ತಾಯ ಮಾಡುತ್ತೇನೆ. ಅವರ ಎರಡನೆಯ ಪ್ರಶ್ನೆಗೆ ಹೇಳುವುದಾದರೆ, ಅಲ್ಲಿ ಈಗ ಕಟ್ಟಡ ಇಲ್ಲ ಹೊಸದಾಗಿ ಮಂಜೂರು ಮಾಡಬೇಕು. ನಮ್ಮ 166 ಸರ್ಕಾರಿ ಕಾಲೇಜುಗಳಲ್ಲಿ 42 ಕಾಲೇಜುಗಳಿಗೆ ಕಟ್ಟಡಗಳು ಇಲ್ಲ ಆದ್ದರಿಂದ ಹುಡ್ಕೋದಿಂದ ಸಾಲವನ್ನೇನಾದರೂ ತೆಗೆದುಕೊಂಡು ಇದನ್ನು ಪ್ರಾರಂಭ ಮಾಡೋಣವೆಂದು ಮಾಡಿದ್ದೇನೆ. ಅದಕ್ಕೆ ತಾವು ಜಾಗವನ್ನು ಕೊಡಬೇಕಾಗುತ್ತದೆ. ನೀವು ಏನಾದರೂ ಮಾಡಿ ಜಾಗದ ವ್ಯವಸ್ಥೆ ಮಾಡಿದರೆ ಈ ಸಲ ಏನಾದರೂ ಕಟ್ಟಡ ಕಟ್ಟಲು ನಾನು ಸಹಾಯ ಮಾಡುತ್ತೇನೆ.

ಶ್ರೀ ಚಂದ್ರಶೇಖರ್ ಚರಂತಿ ಮಠ್:– ಮಾನ್ಯ ಅಧ್ಯಕ್ಷರೆ, ಡಿಗ್ರಿ ಕಾಲೇಜುಗಳಲ್ಲಿ ಇಂಜಿನಿಯರಿಂಗ್ **ಈ ಭಾಷಣವನ್ನು ಮಾನ್ಯ ಸದಸ್ಯರಿಂದ ಪರಿಸ್ಕರಿಸಲ್ಪಟ್ಟಿದೆ** ಕಾಲೇಜುಗಳಲ್ಲಿ, ಗ್ರಾಂಟ್ ಇನ್ ಏಡೆಡ್ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬುತ್ತೀರಾ? ಇದುವರೆಗೆ ತುಂಬುತ್ತಿಲ್ಲ. ಅಲ್ಲಿ ಅನೇಕ ಹುದ್ದೆಗಳು ಖಾಲಿ ಇದೆ. ಆದ್ದರಿಂದ ಅಕ್ರೆಡಿಡೇಷನ್‌ಗೆ ತುಂಬಾ ತೊಂದರೆಯಾಗುತ್ತಿದೆ. ಬ್ಯಾಕ್‌ಲಾಗ್ ತುಂಬಿದ ಮೇಲೆ ಇವುಗಳನ್ನು ತುಂಬುವುದಾಗಿ ಮೊದಲು ಹೇಳಿದ್ದಿರಿ. ಈಗ ಬ್ಯಾಕ್‌ಲಾಗ್ ಅಪಾಯಿಂಟ್‌ಮೆಂಟ್ ಎಲ್ಲಾ ಮುಗಿದು ಹೋಗಿದೆ. ಆದ್ದರಿಂದ ಡಿಗ್ರಿ ಕಾಲೇಜುಗಳು ಇರಬಹುದು, ಇಂಜಿನಿಯರಿಂಗ್ ಕಾಲೇಜುಗಳು ಇರಬಹುದು, ಪಾಲಿಟೆಕ್ನಿಕ್‌ಗಳು ಇರಬಹುದು ಇಲ್ಲಿರುವ ಖಾಲಿ ಹುದ್ದೆಗಳನ್ನು ತುಂಬಲು ತಾವು ಯಾವಾಗ ಪರವಾನಗಿಯನ್ನು ಕೊಡುತ್ತೀರಿ? ನಾವು ಬಹಳ ವರ್ಷಗಳಿಂದ ಇದರ ಬಗ್ಗೆ ತಮಗೆ ಮನವಿ ಮಾಡಿಕೊಳ್ಳುತ್ತಿದ್ದೇವೆ. ಆದರೂ ಯಾವ ಕ್ರಮಗಳನ್ನು ಸರ್ಕಾರ ಕೈಗೊಂಡಿಲ್ಲ. ಇನ್ನಾದರೂ ಸರ್ಕಾರ ಸಕಾಲಿಕ ಕ್ರಮಗಳನ್ನು ಕೈಗೊಳ್ಳುವರೇ?

ಶ್ರೀ ಡಿ. ಮಂಜುನಾಥ್:– ಇಂಜಿನಿಯರಿಂಗ್ ಕಾಲೇಜು ನಮಗೆ ಬರುವುದಿಲ್ಲ ಪರ್ಮನೆಂಟ್ ಆಗಿ ಅಪಾಯಿಂಟ್‌ಮೆಂಟ್ ಮಾಡಲು ಕ್ರಮ ತೆಗೆದುಕೊಂಡಿದ್ದು, ಈಗ ಪಬ್ಲಿಕ್ ಸರ್ವೀಸ್ ಕಮೀಷನ್‌ನವರಿಗೆ ಕಳುಹಿಸುತ್ತಿದ್ದೇವೆ. ಖಾಸಗಿ ಕಾಲೇಜುಗಳಲ್ಲಿ, ಅನುದಾನಿತ ಕಾಲೇಜುಗಳಲ್ಲಿ ಮಾತ್ರ ಹುದ್ದೆಗಳು ಖಾಲಿ ಇದ್ದಾವೆ. ಆರ್ಥಿಕ ಮಿತವ್ಯಯದಿಂದ ಅದನ್ನು ಮಾಡಿಲ್ಲ. ಇಷ್ಟರಲ್ಲೇ ಅದನ್ನೂ ಸಹ ಲಿಫ್ಟ್ ಮಾಡಲು ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಚಂದ್ರಶೇಖರ್ ಚರಂತಿ ಮಠ್:– ಗ್ರಾಂಟ್ ಇನ್ ಏಡ್ ಇಂಜಿನಿಯರಿಂಗ್ ಕಾಲೇಜು ತಮಗೇ ಬರುತ್ತದೆ. ಆ ಬಗ್ಗೆ ಕ್ರಮ ಜರುಗಿಸಿ.

ಶ್ರೀ ಡಿ. ಮಂಜುನಾಥ್:– ಅದನ್ನು ನೋಡುತ್ತೇನೆ.

ಶ್ರೀ ಆರಗಜ್ಞಾನೇಂದ್ರ:– ಮೊನ್ನೆ ಹಣಕಾಸು ಸಚಿವರು ಹಣಕಾಸಿನ ಮಿತವ್ಯಯ ಇಲ್ಲ, ಏಡೆಡ್ ಕಾಲೇಜುಗಳಿಗೆ ಖಾಲಿ ಹುದ್ದೆಗಳನ್ನು ನೇಮಕ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ತಾವು ಈಗ ಮಿತವ್ಯಯ ಇದೆಯೆಂದು ಹೇಳುತ್ತೀರಲ್ಲಾ? ಇದು ಹೇಗೆ?

ಶ್ರೀ ಡಿ. ಮಂಜುನಾಥ್:– ಅವರು ಹೇಳಿದ್ದಾರೆ. ಆದರೆ, ಅದರ ಬಗ್ಗೆ ನಮಗೆ ಸಕ್ರಮವಾದ ಆರ್ಡರ್ ಬಂದಿಲ್ಲ ಅದಕ್ಕಾಗಿ ಇದನ್ನು ಹೇಳಿದೆ. ಅದನ್ನು ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಕಟ್ಟಡಗಳೆಲ್ಲಾ ಅರ್ಧಕ್ಕೆ ನಿಂತಿದೆ, ಅದನ್ನು ಪೂರ್ಣಗೊಳಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

2005–06ನೇ ಸಾಲಿನಲ್ಲಿ ವೃತ್ತಿಶಿಕ್ಷಣ ಸೀಟು ಹಂಚಿಕೆ

227 (2310) ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗಾ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ 2005–06ನೇ ಸಾಲಿನ ವೃತ್ತಿ ಶಿಕ್ಷಣದಲ್ಲಿ ಯಾವ ಅನುಪಾತದಲ್ಲಿ ರಾಜ್ಯದಲ್ಲಿ ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆ ಮಾಡಲು ಸರ್ಕಾರ ನಿರ್ಧರಿಸಿದೆ (ಸಂಪೂರ್ಣ ಮಾಹಿತಿ ಒದಗಿಸುವುದು);